C.C– 872/2025

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 06.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ.ಕೆ.ಎಂ.ಎನ್ ರವರಿಂದಃ**

**1.** ನನಗೆ ರಿಚರ್ಡ್ ಫರ್ನಾಂಡಿಸ್ ರವರು ಪರಿಚಯ ಇದ್ದಾರೆ. ನಿಪಿ–1 ರ ಚೆಕ್ಕಿನಲ್ಲಿರುವ ಸಹಿ ನನ್ನದಲ್ಲ. ನಿಪಿ–1 ರ ಚೆಕ್ಕು ನನ್ನದು. ಸಾಮಾನ್ಯವಾಗಿ ಚೆಕ್ಕನ್ನು ಸಾಲದ ತಿರುವಳಿಗಾಗಿ ಕೊಡುತ್ತಾರೆ ಎಂದರೆ ಸರಿ. ರಿಚರ್ಡ್ ಫರ್ನಾಂಡಿಸ್ ರವರಿಗೆ ನಾನು ಖಾಲಿ ಚೆಕ್ಕನ್ನೇ ಕೊಟ್ಟಿದ್ದೆ. ಖಾಲಿ ಚೆಕ್ಕನ್ನು ಕೊಡುವುದು ಅಪರಾಧ ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದುದಾರರಿಗೆ ನಾನು 1,50,000/– ರೂ.ಗಳನ್ನು

ಕೊಡುವುದು ಬಾಕಿ ಇದೆ ಎಂದರೆ ಸರಿಯಲ್ಲ. ರಿಚರ್ಡ್ ಫರ್ನಾಂಡಿಸ್ ರವರಿಗೆ ನಾನು 9 ಸಾವಿರ ರೂ.ಗಳ ಬಾಡಿಗೆ ಕೊಡುವುದು ಬಾಕಿ ಇದೆ. ಅವರು ನನಗೆ ಮುಂಗಡ ಹಣವನ್ನು ಕೊಡುವುದು ಬಾಕಿ ಇದೆ. ರಿಚರ್ಡ್ ಫರ್ನಾಂಡಿಸ್ ರವರು ಬಾಡಿಗೆ ಬಾಕಿಯನ್ನು ಮುರಿದುಕೊಂಡು ಉಳಿದ ಹಣವನ್ನು ಕೊಡಲು ತಕರಾರು ಮಾಡಿದರು. ಈ ಕುರಿತು ನಾನು ದೂರು ಕೊಡಲು ಹೋದಾಗ ಪೋಲಿಸರು ರಾಜೀ ಮಾಡಿಸಿದ್ದು, ನಂತರ ರಿಚರ್ಡ್ ಫರ್ನಾಂಡಿಸ್ ರವರು 15 ದಿನಗಳ ಕಾಲಾವಕಾಶವನ್ನು ಕೋರಿದರು. ತದನಂತರ ಈ ಪ್ರಕರಣವನ್ನು ಫಿರ್ಯಾದಿಯ ಮೂಲಕ ರಿಚರ್ಡ್ ಫರ್ನಾಂಡಿಸ್ ರವರು ನನ್ನ ವಿರುದ್ಧ ದಾಖಲು ಮಾಡಿದ್ದಾರೆ. ರಿಚರ್ಡ್ ಫರ್ನಾಂಡಿಸ್ ಗೆ ನಾನು ವಕೀಲರ ಮೂಲಕ ಲೀಗಲ್ ನೋಟೀಸ್ ಅನ್ನು ಕೊಡಿಸಿಲ್ಲ.

**2.** ಸಾಮಾನ್ಯವಾಗಿ ನಮಗೆ ಹಣದ ಅಗತ್ಯವಿದ್ದಾಗ ಚೆಕ್ಕನ್ನು ಭದ್ರತೆಗಾಗಿ ಕೊಟ್ಟು ಸಾಲ ಪಡೆಯುತ್ತೇವೆ ಎಂದರೆ ಸರಿ. ಸಾಲದ ವ್ಯವಹಾರ ಮುಗಿದ ನಂತರ ಭದ್ರತೆಗಾಗಿ ಕೊಟ್ಟ ಚೆಕ್ಕು ಮತ್ತು ದಾಖಲೆಗಳನ್ನು ವಾಪಸ್ಸು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ನನ್ನ ವಿರುದ್ಧ ಸಾಕಷ್ಟು ಚೆಕ್ ಬೌನ್ಸ್ ಕೇಸುಗಳು ವಿಚಾರಣೆಗೆ ಬಾಕಿ ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಎಲ್ಲಾ ವ್ಯವಹಾರಗಳನ್ನು ನಾನು ಬಗೆಹರಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ–5 ರಲ್ಲಿನ ಸಹಿ ನನ್ನದಲ್ಲ. ನಿಪಿ–5 ರಲ್ಲಿ ಕಾಣಿಸಿದ ವಿಳಾಸದಲ್ಲಿ ನಾನು 35 ವರ್ಷಗಳಿಂದ ವಾಸವಾಗಿದ್ದೇನೆ. 2023 ರಲ್ಲಿ ಸುಮಾರು 11 ತಿಂಗಳ ಕಾಲ ರಿಚರ್ಡ್ ಫರ್ನಾಂಡಿಸ್ ರವರ ಮನೆಯಲ್ಲಿ ನಾನು ಬಾಡಿಗೆದಾರನಾಗಿ ಇದ್ದೆ. ನನ್ನ ಚೆಕ್ಕು ದುರುಪಯೋಗವಾಗಿದೆ ಎಂದು ನಾನು ಈವರೆಗೆ ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ.

**3.** ಶೋಭಾರವರು ನನ್ನ ಖಾಸಾ ತಂಗಿ. ಅವರನ್ನು ನ್ಯಾಯಾಲಯದಲ್ಲಿ ಕರೆಯಿಸಿ ಸಾಕ್ಷಿ ಮಾಡಿಸಬಲ್ಲೆ. ಫಿರ್ಯಾದಿಗೆ ಕಾನೂನಾತ್ಮಕವಾಗಿ ಮರು ಪಾವತಿ ಮಾಡಬೇಕಾದ ಹಣದ ತಿರುವಳಿಗಾಗಿ ನಿಪಿ–1 ರ ಚೆಕ್ಕನ್ನು ನೀಡಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಾಗಿದ್ದರೂ ಸಹ ನನ್ನ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಜನರಿಂದ ಸಾಲ ಪಡೆದು ಮೋಸ ಮಾಡುವ ಹವ್ಯಾಸ ಹೊಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.